## 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,
## ಪೀಠಾಸೀನ ಕೊಳ್ಳೇಗಾಲ

**SPL.C 5080/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಶಿವಮಾದಯ್ಯ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಲೇಟ್ ಮಾದಯ್ಯ | 10.06.2026 |
| **ವಯಸ್ಸು** | : | 55 ವರ್ಷ | |
| **ವೃತ್ತಿ** | : | ಆರಕ್ಷಕ ನೀರಿಕ್ಷಕರು, ಹುಣಸೂರು ಪಟ್ಟಣ | **ಫ್ರಾ.ಸಾಃ** 18 |
| **ವಾಸ ಸ್ಥಳ** | : | ಹುಣಸೂರು | **ಚಾ.ಸಾಃ** 49 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ದಿಃ 30.01.2024 ರಿಂದ ದಿಃ 12.05.2026 ರವರೆಗೆ ಕೊಳ್ಳೇಗಾಲದಲ್ಲಿ ವೃತ್ತ ನೀರಿಕ್ಷಕನಾಗಿ ನಿರ್ವಹಿಸಿರುತ್ತೇನೆ.**

ದಿಃ 17.12.2024 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ 48 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ಆರೋಪಿಯ ಪತ್ತೆಗಾಗಿ ಮತ್ತು ಪ್ರಕರಣದ ತನಿಖೆಯನ್ನು ಮುಂದುವರೆಸಲು ಚಾಸಾ 48ರ ವರಿಗೆ ಮೌಖಿಕವಾಗಿ ಆದೇಶ ಮಾಡಿರುತ್ತೇನೆ. ಚಾಸಾ 39 ಮತ್ತು 40 ರವರು ಆರೋಪಿಯನ್ನು ಪತ್ತೆ ಮಾಡಿ ಬೆಳಗ್ಗೆ 9.45 ಕ್ಕೆ ನನ್ನ ಮುಂದೆ ಹಾಜರುಪಡಿಸಿದ್ದು, ನಾನು ಆರೋಪಿಯನ್ನು ವಿಚಾರಣೆ ಮಾಡಿ ಆತನ ಸ್ವ ಇಚ್ಚೆ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ನಂತರ ಆರೋಪಿಯ ದಸ್ತಗಿರಿ ಕ್ರಮ ಅನುಸರಿಸಿರುತ್ತೇನೆ.

ಆರೋಪಿಯು ಕೃತ್ಯ ಸ್ಥಳವನ್ನು ತೋರಿಸುವುದಾಗಿ ಹೇಳಿಕೆ ನೀಡಿದ್ದು, ಪಂಚರಾಗಿ ಚಾಸಾ 6 ಮತ್ತು 10 ರವರನ್ನು ಬರಮಾಡಿಕೊಂಡು ಸದರಿ ಪಂಚರ ಸಮಕ್ಷಮ ಆರೋಪಿ ತೋರಿಸಿದ ಘಟನಾ ಸ್ಥಳದಲ್ಲಿ ಮಹಜರ್ ಅನ್ನು ಬರೆದಿರುತ್ತೇನೆ. ಮಹಜರ್ ಅನ್ನು ನಿಪಿ 26 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 26(ಬಿ) ಎಂದು ಗುರುತಿಸಲಾಯಿತು. ನಂತರ ಆರೋಪಿಯು ತಾನು ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಪಡೆದ ಸ್ಥಳ ಮತ್ತು ಸಂಪರ್ಕ ಪಡೆಯಲು ಉಪಯೋಗಿಸಿದ ತಂತಿಗಳನ್ನು ತೋರಿಸಿರುತ್ತಾನೆ. ಸದರಿ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿ ಆರೋಪಿ ತೋರಿಸಿದ 5 ತಂತಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಮಹಜರ್ ಅನ್ನು ನಿಪಿ 27 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ 27(ಬಿ) ಎಂದು ಗುರುತಿಸಲಾಯಿತು. ತಂತಿಗಳನ್ನು ಈಗಾಗಲೇ ಮು.ಮಾ 3 ರಿಂದ 7 ಎಂದು ಗುರತಿಸಲಾಗಿದೆ. ಮಹಜರ್ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಭಾವಚಿತ್ರಗಳನ್ನು ನಿಪಿ 28 ರಿಂದ 35 ಎಂದು ಈಗಾಗಲೇ ಗುರುತಿಸಲಾಗಿದೆ. ಮಹಜರ್ ಗಳನ್ನು ಬೆಳಗ್ಗೆ 11.30 ರಿಂದ ಮದ್ಯಾಹ್ಞ 1.00 ಗಂಟೆಯವರೆಗೆ ಬರೆದಿರುತ್ತೇನೆ. ನಂತರ ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ನಂತರ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರಾದ ಚಾಸಾ 3 ರಿಂದ 17 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ನಂತರ ಚಾಸಾ 39 ಮತ್ತು 40 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಮಹಜರ್ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದ ಚಾಸಾ 45 ರವರು ಭಾರತೀಯ ಸಾಕ್ಷಿ ಅಧಿನಿಯಮ ಕಲಂ 63(4)(ಸಿ) ರೀತಿ ದೃಢಿಕರಣವನ್ನು ಕೊಟ್ಟಿರುತ್ತಾರೆ. ದೃಢಿಕರಣವನ್ನು ನಿಪಿ 36 ಎಂದು ಈಗಾಗಲೇ ಗುರುತಿಸಲಾಗಿದೇ. ಸಾಕ್ಷಿ ಸಹಿಯನ್ನು ನಿಪಿ 36(ಬಿ) ಎಂದು ಗುರುತಿಸಲಾಯಿತು.

ದಿಃ 20.12.2024 ರಂದು ಕೃತ್ಯ ನಡೆದ ಸ್ಥಳದ ಪಹಣಿಯನ್ನು ನೀಡುವಂತೆ ಕಂದಾಯ ಇಲಾಖೆಗೆ ಮನವಿ ಸಲ್ಲಿಸಿರುತ್ತೇನೆ. ಸದರಿ ಸ್ಥಳದಲ್ಲಿ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ಮತ್ತು ಸದರಿ ಸ್ಥಳದ ನಕಾಶೆಯನ್ನು ನೀಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ.

ದಿಃ 23.12.2024 ರಂದು ಚಾಸಾ 2 ರಿಂದ 6 ಮತ್ತು 10 ರವರ ಹೇಳಿಕೆಗಳನ್ನು ಮಾಡಿಕೊಳ್ಳುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ.

ದಿಃ 26.12.2024 ರಂದು ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಚಾಸಾ 33 ರವರ ಕಚೇರಿಗೆ ಮನವಿ ಸಲ್ಲಿಸಿರುತ್ತೇನೆ.

ದಿಃ 03.01.2025 ರಂದು ಮೃತಳ ವಿಸರ ಮತ್ತು ಪಿ.ಎಂ ವರದಿಯನ್ನು ಮತ್ತು ಶವ ಪರೀಕ್ಷಾ ಸಮಯದಲ್ಲಿ ಮೃತಳಿಂದ ಸಂಗ್ರಹಿಸಿದ ವಸ್ತುಗಳನ್ನು ಪಡೆಯಲು ಚಾಸಾ 41 ರವರನ್ನು ನೇಮಿಸಿರುತ್ತೇನೆ. ಅದೇ ದಿನ ಚಾಸಾ 41 ರವರು ವೈದ್ಯರು ಸಂಗ್ರಹಿಸಿದ ವಸ್ತುಗಳನ್ನು ಮತ್ತು ಪಿ.ಎಂ ವರದಿಯನ್ನು ಹಾಜರುಪಡಿಸಿರುತ್ತಾರೆ. ಪಿ.ಎಂ ವರದಿಯನ್ನು ನಿಪಿ 43 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ 43(ಎ) ಎಂದು ಗುರುತಿಸಲಾಯಿತು. ವಸ್ತುಗಳ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ.

ದಿಃ 06.01.2025 ರಂದು ಮೃತಳ ಬಾಬ್ತು ವಿಸರವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತೇನೆ. ಆ ಬಗ್ಗೆ ಚಾಸಾ 41 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

ದಿಃ 10.01.2025 ರಂದು ಚಾಸಾ 2 ರಿಂದ 6 ಮತ್ತು 10 ರವರು ನ್ಯಾಯಾಲಯದ ಮುಂದೆ ಹೇಳಿಕೆಗಳನ್ನು ನೀಡಿರುತ್ತಾರೆ. ಹೇಳಿಕೆಗಳನ್ನು ನಿಪಿ 1 ರಿಂದ 6 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ಮೃತಳ ಬಾಬ್ತು ಎಂ.ಎಲ್.ಸಿ ಯನ್ನು ಆಸ್ಪತ್ರೆಯಿಂದ ಪಡೆದಿರುತ್ತೇನೆ. ಎಂ.ಎಲ್.ಸಿ ದಾಖಲಾತಿಯನ್ನು ನಿಪಿ 44 ಎಂದು ಸಾಕ್ಷಿ ಸಹಿಯನ್ನು ನಿಪಿ 44(ಎ) ಎಂದು ಗುರುತಿಸಲಾಯಿತು.

ದಿಃ 15.01.2025 ರಂದು ಚಾಸಾ 18 ಮತ್ತು 19 ರವರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ.

ದಿಃ 22.01.2025 ರಂದು ಚಾಸಾ 17 ರವರ ಹೇಳಿಕೆಯನ್ನು ಮಾಡಿಕೊಳ್ಳುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ.

ದಿಃ 25.01.2025 ರಂದು ಚಾಸಾ 17 ರವರು ಹೇಳಿಕೆಯನ್ನು ನೀಡಿರುತ್ತಾರೆ. ಹೇಳಿಕೆಯನ್ನು ನಿಸಿ 5 ಎಂದು ಈಗಾಗಲೇ ಗುರುತಿಸಲಾಗಿದೆ.

ದಿಃ 06.02.2025 ರಂದು ವಿಧಿವಿಜ್ಞಾನ ಪ್ರಯೋಗಾಲಯದಿಂದ ವರದಿಯನ್ನು ಪಡೆದಿರುತ್ತೇನೆ. ವರದಿಯನ್ನು ನಿಪಿ 45 ಎಂದು ಸಾಕ್ಷಿ ಸಹಿಯನ್ನು ನಿಪಿ 45(ಎ) ಎಂದು ಗುರುತಿಸಲಾಯಿತು.

ದಿಃ 18.02.2025 ರಂದು ಚಾ.ನಗರ ಜಿಲ್ಲಾ ಆಸ್ಪತ್ರೆಯಿಂದ ಪ್ರಯೋಗಾಲಯದ ವರದಿಯನ್ನು ಪಡೆದುಕೊಂಡಿರುತ್ತೇನೆ. ವರದಿಯನ್ನು ನಿಪಿ 46 ಎಂದು ಸಾಕ್ಷಿ ಸಹಿಯನ್ನು ನಿಪಿ 46(ಎ) ಎಂದು ಗುರುತಿಸಲಾಯಿತು.

ದಿಃ 21.02.2025 ರಂದು ಚಾ.ನಗರ ಜಿಲ್ಲಾ ಆಸ್ಪತ್ರೆಗೆ ಸ್ಪಷ್ಟ ಅಭಿಪ್ರಾಯ ಕೋರಿ ಮನವಿ ಸಲ್ಲಿಸಿರುತ್ತೇನೆ.

ದಿಃ 28.02.2025 ರಂದು ಆಸ್ಪತ್ರೆಯಿಂದ ಅಂತಿಮ ಅಭಿಪ್ರಾಯವನ್ನು ಪಡೆದಿರುತ್ತೇನೆ. ಅಭಿಪ್ರಾಯವನ್ನು ನಿಪಿ 47 ಎಂದು ಸಾಕ್ಷಿ ಸಹಿಯನ್ನು ನಿಪಿ 47(ಎ) ಎಂದು ಗುರುತಿಸಲಾಯಿತು.

ದಿಃ 04.03.2025 ರಂದು ಘಟನಾ ಸ್ಥಳದ ಕಂದಾಯ ದಾಖಲಾತಿಯನ್ನು ಮತ್ತು ವರದಿಯನ್ನು ಪಡೆದಿರುತ್ತೇನೆ. ಪಹಣಿಯನ್ನು ನಿಪಿ 19 ಎಂದು ಈಗಾಗಲೇ

ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 19(ಎ) ಎಂದು ಗುರುತಿಸಲಾಯಿತು. ವರದಿಯನ್ನು ನಿಪಿ 23 ಮತ್ತು 24 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿ ಸಹಿಗಳನ್ನು ನಿಪಿ 23(ಬಿ) ಮತ್ತು 24(ಬಿ) ಎಂದು ಗುರುತಿಸಲಾಯಿತು.

ದಿಃ 28.03.2025 ರಂದು ಚಾಸಾ 33 ರವರಿಂದ ವರದಿಯನ್ನು ಪಡೆದಿರುತ್ತೇನೆ. ವರದಿಯನ್ನು ನಿಪಿ 18 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 18(ಬಿ) ಎಂದು ಗುರುತಿಸಲಾಯಿತು.

ದಿಃ 02.05.2025 ರಂದು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಪಡೆದಿರುತ್ತೇನೆ. ನಕಾಶೆಯನ್ನು ನಿಪಿ 17 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 17(ಬಿ) ಎಂದು ಗುರುತಿಸಲಾಯಿತು.

ದಿಃ 01.07.2025 ರಂದು ಚಾಸಾ 30 ರವರಿಂದ ಘಟನಾ ಸಮಯದಲ್ಲಿವಿದ್ಯುತ್ ಸಂಪರ್ಕ ಇದ್ದ ಬಗ್ಗೆ ವರದಿಯನ್ನು ಪಡೆದಿರುತ್ತೇನೆ. ವರದಿಯನ್ನು 21 ಮತ್ತು 22 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 22(ಬಿ) ಎಂದು ಗುರುತಿಸಲಾಯಿತು.

ದಿಃ 21.07.2025 ರಂದು ಚಾಸಾ 32 ರವರಿಂದ ವರದಿಯನ್ನು ಪಡೆದಿರುತ್ತೇನೆ. ವರದಿಯನ್ನು ನಿಪಿ 20 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 20(ಬಿ) ಎಂದು ಗುರುತಿಸಲಾಯಿತು.

ದಿಃ 26.08.2025 ರಂದು ಚಾಸಾ 35 ಮತ್ತು ಅಧಿಕಾರಿಗಳಿಂದ ಕೃತ್ಯ ಸ್ಥಳದ ಬಗ್ಗೆ ವರದಿಯನ್ನು ಪಡೆದಿರುತ್ತೇನೆ. ವರದಿಯನ್ನು ನಿಪಿ 23 ಮತ್ತು 24 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೊ.ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಚಾಸಾ 39 ರವರು ವರದಿ

ಸಲ್ಲಿಸಿದ್ದು, ಸದರಿ ವರದಿಯನ್ನು ನಿಪಿ 48 ಎಂದು, ಸಾಕ್ಷಿ ಸಹಿಯನ್ನು ನಿಪಿ 48(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ- ಶ್ರೀ ಎಂ.ಎಂ ವಕೀಲರಿಂದ**

ಆರೋಪಿ ನಮ್ಮನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ಮು.ಮಾ 1 ರಿಂದ 5 ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಸಾಕ್ಷಿದಾರರು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಪಹಣಿಯಲ್ಲಿ ಆರೋಪಿಯ ಹೆಸರು ಇರುವುದಿಲ್ಲ ಆತನ ತಂದೆ ಹೆಸರು ಇರುತ್ತದೆ. ಪಹಣಿಯಲ್ಲಿ ಕಂಡು ಬರುವ ಇತರ ವ್ಯಕ್ತಿಗಳು ಮೃತಪಟ್ಟಿರುತ್ತಾರೆ. ಪಹಣಿಯಲ್ಲಿ ಕಂಡು ಬರುವ ವ್ಯಕ್ತಿಗಳು ಕೃತ್ಯ ಸಮಯದಲ್ಲಿ ಬದುಕಿದ್ದರು ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳ ಯಾರಿಗೆ ಸೇರಿದ್ದು ಎಂಬುದರ ಬಗ್ಗೆ ನಾನು ದಾಖಲಾತಿಯನ್ನು ಪಡೆದಿರುತ್ತೇನೆ. ಸರ್ವೆ ಇಲಾಖೆಯಿಂದ ಅಳತೆ ಮಾಡಿಸಿರುವುದಿಲ್ಲ. ನಾನು ಭಾವಚಿತ್ರಗಳನ್ನು ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳವನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 26 ರಲ್ಲಿ ರಾಚಪ್ಪಾಜಿ ಎಂಬುದಕ್ಕೆ ಬದಲಾಗಿ ಕೈ ತಪ್ಪಿನಿಂದ ಸಿದ್ದಪ್ಪಾಜಿ ಎಂದು ನಮೂದಾಗಿರುತ್ತದೆ. ನಾನು ಸಾಕ್ಷಿದಾರರ ಹೇಳಿಕೆಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಅಕ್ಕಪಕ್ಕದ ಜಮೀನವರನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 35 ರವರು ನನಗೆ ಯಾವುದೇ ವರದಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ಈ ಪ್ರಕರಣಕ್ಕೆಂದು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 33 ರವರು ನನಗೆ ಯಾವುದೇ ವರದಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ನಕಾಶೆಯನ್ನು ನಾನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಬೇರೆ ಸಹೋದರರು ಇರುತ್ತಾರೆ. ಆರೋಪಿಯು ಕೃತ್ಯ ನಡೆದ ಗ್ರಾಮದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ

ವಿರುದ್ಧ ಸುಳ್ಳು ದೊ.ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮೃತ ಪವಿತ್ರಾಳ ಮರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ